**ಪಿಡಬ್ಲ್ಯೂ-1**

**ದಿನಾಂಕ 13.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ಮುಂದುವರಿದ ಪಾಟಿ ಸವಾಲು **1** ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ **ವಕೀಲರವರಿಂದಃ**

5 ನೇ ಪ್ರತಿವಾದಿಗೆ ನಾನು ಪೂರ್ವಾರ್ಜಿತ ಮನೆಯನ್ನು ಮಾರಾಟ ಮಾಡಿರುವುದಿಲ್ಲ, ನಾನು ಮಾರಾಟ ಮಾಡಿರುವುದಿಲ್ಲ, ನನ್ನ ತಂದೆ ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಸುಮಾರು 15 ರಿಂದ 20 ವರ್ಷಗಳ ಮೃತಪಟ್ಟಿರುತ್ತಾರೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಪುಟ್ಟೇಗೌಡರ ಮಗ ಜವರೇಗೌಡ ಎಂದರೆ ನಾನೇ. ಮನೆಯು ನನ್ನ ಹೆಸರಿನಲ್ಲಿ ಇರಲಿಲ್ಲ. ನಾನು 4 ನೇ ಪ್ರತಿವಾದಿಗೆ ಆ ಮನೆಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಸದರಿ ಮನೆಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಸದರಿ ಮನೆಯ ಖಾತೆಯನ್ನು ಆತನ ಹೆಂಡತಿಯಾದ ಇಂತ್ಯಾಜ್ ಬಾನುರವರ ಹೆಸರಿಗೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. 1 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಮನೆಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದಾಗಿ ತಕರಾರಿನಲ್ಲಿ ತಿಳಿಸಿದ ಮೇರೆಗೆ ನಾನು 4 ಮತ್ತು 5 ನೇ ಪ್ರತಿವಾದಿಯರನ್ನು ಪಕ್ಷಗಾರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಓದಲು ಮತ್ತು ಬರೆಯಲು ಬಂದರೂ ಸಹಾ ದಾಖಲೆಗಳನ್ನು ನ್ಯಾಯಾಲಯದಲ್ಲಿ ಓದಬೇಕಾಗುತ್ತದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪಾಟಿ ಸವಾಲಿನಲ್ಲಿರುವ ರುಜುವನ್ನು ಹಾಗೂ ದೃಢಿಕೃತ ಖಾತೆ ಬದಲಾವಣೆಯ ದಾಖಲೆಯಲ್ಲಿ ಕಂಡು ಬರುತ್ತಿರುವ ಸಹಿಗಳು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಪಂಚಾಯತಿ ಪಾಲುಪಟ್ಟಿ ಪ್ರಕಾರ ದಾವಾ ಸ್ವತ್ತನ್ನು ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಿ ಎಂದು ಅರ್ಜಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ, ಸದರಿ ದಾಖಲೆಯಲ್ಲಿ ಕಂಡು ಬರುತ್ತಿರುವ ಸಹಿ ನನ್ನದಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು ಖಾತೆ ಮಾಡಿಕೊಂಡಿರುವ ಬಗ್ಗೆ ನಾನು ಅವರ ವಿರುದ್ಧ ಕಾನೂನು ಕ್ರಮವನ್ನು ಕೈಗೊಂಡಿರುತ್ತೇನೆ.

ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕಂದಾಯ ಪಾವತಿ ದಾಖಲೆಗಳು ಯಾವುದು ಇಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಸಹಾ ಸದರಿ ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ಪಾಂಡವಪುರ